ಬರೆದರೆ ಅದನ್ನು ಓದಿರುತ್ತಿದ್ದರು, ಕೆಲವು ಮೇಷ್ಟ್ರುಗಳು ನಾನು ಕಂಡ ತಕ್ಷಣವೇ ವೇದ ನಿನ್ನ ಲೇಖನ ಓದಿದೆ ಎಂದು ಬೆನ್ನು ಚಪ್ಪರಿಸುವ ಹಾಗೆ ಹೇಳುತ್ತಿದ್ದರು.

ಎಲ್ಲಕ್ಕಿಂತ ಮುಖ್ಯವಾಗಿ ನನಗೆ ವಿಮರ್ಶಕಿ ವಿಜಯಾ ದಬ್ಬೆ ಅವರನ್ನು ಹತ್ತಿರದಿಂದ ನೋಡುವ, ಅವರ ಮಾತುಗಳನ್ನು ಕೇಳಿಸಿಕೊಳ್ಳುವ ಅವಕಾಶ ಸಿಕ್ಕಿದ್ದರಿಂದ ಬಹಳ ಸಂತೋಷವಾಗಿತ್ತು. ನಾನು ಅಲ್ಲಿಯತನಕ ಅವರ ವಿಭಿನ್ನವಾದ ನಿಲುವು ಆಲೋಚನೆಗಳನ್ನು ಓದಿ ತುಂಬ ಮೆಚ್ಚಿಕೊಂಡಂಥವಳು. ನಾನು ಕಾಲೇಜಿಗೆ ಹೋಗಲು ಶುರು ಮಾಡಿದ ಆರು ತಿಂಗಳಿನಲ್ಲಿ ಅವರು ಹೆರಿಗೆ ರಜೆಯ ಮೇಲೆ ಹೊರಟುಹೋದರು. ಮುಂದೆ ನಾನು ಸಂಶೋಧನಾ ವಿದ್ಯಾರ್ಥಿಯಾದಾಗ ಅವರ ಜೊತೆ ಹೆಚ್ಚಿನ ಒಡನಾಟ ಸಾಧ್ಯವಾಯಿತು.

ಎಲ್ಲ ಸಂಸರ್ಗದ ನಡುವೆ ನನಗೆ ನಾನು ಸೃಷ್ಟಿ ಮಾಡಿದ ಸಾಹಿತ್ಯದ ಬಗ್ಗೆ ಒಂದು ಬಲವಾದ ಅಭಿಪ್ರಾಯ ಮೂಡಿತು. ಅದೇನೆಂದರೆ, ನಾನು ಇಲ್ಲಿಯವರೆಗೆ ಬರೆದದ್ದು ಬರೀ 'ಜನ–ಪ್ರಿಯ' ಸಾಹಿತ್ಯ ಅನ್ನುವುದು. ಆದರೆ, ಅದು ತಪ್ಪು ಎಂದಾಗಲಿ, ನಷ್ಟ ಎಂದಾಗಲಿ ನನಗೆ ಅನ್ನಿಸಿಲ್ಲ. ಬರವಣಿಗೆ ಹದ ಕಟ್ಟಬೇಕೆಂದರೆ ಈ ಎಲ್ಲ ಪ್ರಯಾಣ ಅತ್ಯಗತ್ಯ. ಬೇಸಾಯಕ್ಕೆ ಪ್ರತಿ ಹಂತವೂ ಮುಖ್ಯವಾಗುವಂತೆ, ಸೃಜನಶೀಲ ಸಾಹಿತಿ ಆಗುವತ್ತ ಇಡುವ ಪ್ರತಿ ಹೆಜ್ಜೆಯೂ ಮುಖ್ಯವೆ!

ಚೆಲ್ಲಿದ ಬೀಜಗಳೆಲ್ಲ ಫಲ ಕಟ್ಟುತ್ತವೆ, ಬೆಳೆಸಿದ ಪ್ರತಿ ಮರವೂ ಸಿಹಿ ಹಣ್ಣುಗಳನ್ನು ನೀಡುತ್ತದೆ ಎಂದು ಅಲ್ಲ. ನನ್ನ ತಿಳಿವಳಿಕೆಯ ಪರಿಧಿಯಲ್ಲಿ ಆಗಿನ ನನ್ನ ತಯಾರಿಯಲ್ಲಿ ಬರೆದ ಪ್ರತಿ ಸಾಲೂ ಆಯಾ ಕಾಲಕ್ಕೆ ಸೇರಿದ್ದು.

◆ **ಕೃತಿ ರಚನೆಯಲ್ಲಿ ತೊಡಗುವಾಗ ನೀವು ಹೇಗೆ ತಯಾರಿ ಮಾಡಿಕೊಳ್ಳುತ್ತೀರಿ?**

ಯಾವುದೋ ಆಲೋಚನೆ ಮೂಡಿದಾಗ ಅದರ ಅಸ್ಥಿಪಂಜರ ಇರುತ್ತೆ. ನಂತರ ನಾನೇನೋ ಬರೆಯಲು ಹೊರಡುತ್ತಿದ್ದೇನೆ ಎನ್ನುವಾಗ ಪೆನ್ನನ್ನು ಪೇಪರಿಗೆ ಇಡುವ ತನಕವೂ ನಾನೇನು ಬರೆಯುತ್ತೇನೆ ಎಂಬುದು ನನಗೆ ಸ್ಪಷ್ಟವಾಗಿರುವುದಿಲ್ಲ. ಆ ಮಟ್ಟಿಗೆ ನನ್ನ ಬರಹಗಳು ಸುಪ್ತಪ್ರಜ್ಞೆಯಲ್ಲಿ ಮೂಡುತ್ತವೆ ಎನಿಸುತ್ತದೆ. ಇದು ಮೊದಲ ಸಾಲಿನಿಂದ ಹಿಡಿದು ಕೃತಿಯ ಕೊನೆಯ ಸಾಲಿನವರೆಗೂ ಹೀಗೇ ಸಾಗುತ್ತದೆ.

◆ **ಒಂದು ಆಲೋಚನೆಯಿಂದ ಹಸ್ತಪ್ರತಿ ಆಗುವ ಬಗೆ ಹೇಳಿದಿರಿ. ಆ ಹಸ್ತಪ್ರತಿ ಪುಸ್ತಕವಾಗುವ ಭೌತಿಕ ಕ್ರಿಯೆ ಹೇಗೆ? ಆಧುನಿಕ ತಂತ್ರಜ್ಞಾನವನ್ನು ಬಳಸುತ್ತೀರಾ?**

ಇದು ನಾನು ಮಾನಸಿಕವಾಗಿ ಹಾಕಿಕೊಂಡಿರುವ ಪರದೆ ಅಂತಲೇ ತಿಳಿದುಕೊಂಡರೂ ಪರವಾಗಿಲ್ಲ. ಆದರೆ, ಆಧುನಿಕ ತಂತ್ರಜ್ಞಾನ ನನಗೆ ಸೇರಿದ್ದಲ್ಲ ಎಂದು ನನಗೆ ಯಾವತ್ತೂ ಅನಿಸಿದೆ. ನನ್ನ ಎಳೆಯ ವಯಸ್ಸಿನಲ್ಲಿ ನನ್ನ ತಂದೆ ಒಂದು ಟೈಪ್‌ರೈಟರ್ ತರಬೇಕು ಅಂತ ಯೋಚಿಸಿದ್ದರು. ಆಗೆಲ್ಲ ಬರಹಗಾರರ ಮನೆಯಲ್ಲಿ ಟೈಪ್‌ರೈಟರ್ ಇರುವುದು ಕಡ್ಡಾಯ ಮತ್ತು ಪ್ರತಿಷ್ಠೆ ಆಗಿತ್ತು. ಆದರೆ, ಆಗಲೇ ನಾನು ನನ್ನ ತಂದೆಯವರಿಗೆ ಅದೆಲ್ಲ ಬೇಡ ಎಂದು ಹೇಳಿದ್ದೆ. ಈಗಲೂ ನನಗೆ ಕಂಪ್ಯೂಟರ್‌ನಲ್ಲಾಗಲೀ ಲ್ಯಾಪ್‌ಟಾಪಿನಲ್ಲಾಗಲೀ ಬರೆಯಲು ಸಾಧ್ಯವೇ ಇಲ್ಲ. ಪೆನ್ನು ಹಾಳೆ ಇಲ್ಲದೆ ನನ್ನ ಬರವಣಿಗೆ ಆಗುವುದಿಲ್ಲ. ಅದೊಂದು ಭೌತಿಕ ಮತ್ತು ಮಾನಸಿಕ ಕ್ರಿಯೆ. ಕೈಯಲ್ಲೇ ಬರೆದರೂ ಬರೆದನಂತರ ತಯಾರಾಗುವ ಲೇಖನದಲ್ಲಿ ನಾನು ಚಿತ್ತುಕಾಟು ಮಾಡುವುದಿಲ್ಲ. ಬಹುಶಃ ನನ್ನ ಆಲೋಚನಾ ಕ್ರಮಕ್ಕೆ ಪದಗಳ ಹರಿಯುವಿಕೆಗೂ, ಪೆನ್ನು ಮತ್ತು ಪೇಪರ್‌ನಂತಹ ನಿರ್ಜೀವ ವಸ್ತುಗಳಿಗೂ ಏನೋ ಒಂದು ನಿಸ್ತಂತು ಕೆಲಸ ಮಾಡುತ್ತಿರಬೇಕು.